**ಸಾಕ್ಷಿಯನ್ನು ದಿನಾಂಕಃ 12-11-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

1. ಪ್ರತಿವಾದಿಗಳು ನನ್ನ ಪರಿಚಯಸ್ತರು. ನಾವು ಒಂದೇ ಸಮುದಾಯಕ್ಕೆ ಸೇರಿದವರು ಅಂದರೆ ಸರಿ. ಪ್ರತಿವಾದಿಗಳು ನನ್ನ ಸಂಬಂದಿಕರು ಅಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ನೋಡಿದ್ದೇನೆ ಆದರ ಸರ್ವೆ ನಂ 106 ಇರುವುದು ಅದರ ವಿಸ್ತೀರ್ಣ 1 ಎಕರೆ 74 ಸೆನ್ಸ ಇರುವುದು.

2. ದಾವಾ ಅಸ್ತಿಯ ಪೂರ್ವಕ್ಕೆ ಆರೋಡ ಕೆಂಚಪ್ಪನ ಹೊಲ, ಪಶ್ಚಿಮಕ್ಕೆ ಚೌಡೇರ ಮಾಳಮ್ಮನ ಹೊಲ, ಉತ್ತರ ಮತ್ತು ದಕ್ಷಿಣಕ್ಕೆ ಆಲೋಡ ರಾಮಪ್ಪನ ಹೊಲ ಇರುವುದು.

3. ದಾವಾ ಅಸ್ತಿಯ ಹತ್ತಿರ ಅಂದರೆ 5-6 ಹೊಲ ಬಿಟ್ಟು ನನ್ನ ಹೊಲ ಇರುವುದು ಅದರ ಸರ್ವೆ ನಂ 178 ಇರುವುದು. ಅದು ನನ್ನ ತಾಯಿಯ ಹೆಸರಿನಲ್ಲಿದ್ದು ಅದು 6 ಎಕರೆ ಇರುವುದು. ನನ್ನ ತಾಯಿಯ ಹೆಸರು ಮಂಜಮ್ಮ. ನಾನು ಈ ದಿನ ಪಹಣಿಯನ್ನು ತಂದಿರುವುದಿಲ್ಲ. ಪಹಣಿ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ದಾವಾ ಅಸ್ತಿಯ ಅಕ್ಕ ಪಕ್ಕದಲ್ಲಿ ಯಾವುದೇ ದಾರಿ ಇಲ್ಲ ಅಂದರೆ ಸರಿ. ದಾವಾ ಅಸ್ತಿಯ ಪಕ್ಕದಲ್ಲಿ ಇರುವ ದಾರಿಯಲ್ಲಿ ಹೋಗಿ ಬಂದು ಮಾಡುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4. ನಾನು ವಾದಿಯನ್ನು ನೋಡಿದ್ದೇನೆ ಅವರು ನಮ್ಮ ಗ್ರಾಮದವರು. ಅದನ್ನು ವಾದಿಯರು ಸಾಗುವಳಿ ಮಾಡುವರು ಅಂದರೆ ಸರಿಯಲ್ಲ. 1980 ರಿಂದ ಇಂದಿನವರೆಗೂ ವಾದಿಯರೇ ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿರುವರು ಅಂದರೆ ಸರಿಯಲ್ಲ. 2 ಮತ್ತು 4 ನೇ ಪ್ರತಿವಾದಿಗಳು ಎಂದು

ನಾನು ಪ್ರಮಾಣ ಪತ್ರದಲ್ಲಿ ಬರೆಸಿದ್ದು 2 ನೇ ಪ್ರತಿವಾದಿಯ ಹೆಸರು ಹನುಮಂತಪ್ಪ ಮತ್ತು 4 ನೇ ಪ್ರತಿವಾದಿಯ ಹೆಸರು ಪರಸಪ್ಪ ಎಂದು ಇರುತ್ತದೆ. ಅವರಿಬ್ಬರೂ 1 ನೇ ಪ್ರತಿವಾದಿಯ ಮಕ್ಕಳು ಅಂದರೆ ಸರಿ. ವಾದಿ ನಮ್ಮ ಸಮುದಾಯಕ್ಕೆ ಸೇರಿದವರು ಅಲ್ಲ ಅಂದರೆ ಸರಿ.

5. ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತನ್ನು ಎಂದೂ ಸಾಗುವಳಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. DW-2 ಇವರು ನಮ್ಮ ಸಮುದಾಯದವರು ಅಂದರೆ ಸರಿ. ಈ ನ್ಯಾಯಾಲಯದಲ್ಲಿ ನಮಗೆ ಸಂಬಂದಿಸಿದ ದಾವೆಯು ಚಾಲ್ತಿಯಲ್ಲಿ ಇರುತ್ತದೆ. ಅದರಲ್ಲಿ ಸಾಕ್ಷಿದಾರರಾಗಿ ಪ್ರತಿವಾದಿಗಳು ಇರುವುದಿಲ್ಲ. ವಾದಿಯ ಹಕ್ಕನ್ನು ನಷ್ಟಗೊಳಿಸಲು ಪ್ರತಿವಾದಿ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**12-11-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 12.11.2025